ಮೂಲ ದಾವಾ ನಂಃ 29/2022

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **07-02-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ ವಕೀಲರಿಂದಃ**

ನಾನು ಉಪ್ಪೋಣಿಯಲ್ಲಿ ಓದಿದ ಶಾಲೆ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಆಗಿರುವುದಿಲ್ಲ, ಆದರೆ ಅದು ಉರ್ದು ಶಾಲೆಯಾಗಿರುತ್ತದೆ. ಸದರಿ ಶಾಲೆಯ ಹೆಸರು ಶರೀಫಾಬಿ ಜವರದ್ದೀನ್ ಸಂಶಿ ಆಗಿರುತ್ತದೆ . ಸದರಿ ಶಾಲೆಯಲ್ಲಿ ನಾನು ಕಲಿತ ಬಗ್ಗೆ ನನ್ನ ಹತ್ತಿರ ದಾಖಲೆಗಳಿದ್ದು , ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದರಿ ಶಾಲೆಯಲ್ಲಿ ಒಂದು ಕನ್ನಡ ಭಾಷೆಯ ವಿಷಯವಿತ್ತು. ಸದರಿ ವಿಷಯವನ್ನು ನಾನು 1-6 ನೇ ತರಗತಿಯವರೆಗೂ ಓದಿದ್ದೇನೆ. ನಾನು ಕನ್ನಡದ ಕಾದಂಬರಿಗಳನ್ನು ಓದುತ್ತೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಸ್ಪಷ್ಟವಾಗಿ ಬಂದರೂ ಸಹ ನಾನು ಈ ಹಿಂದೆ ನನಗೆ ಹಿಂದಿ ಭಾಷೆ ಅಷ್ಟೇ ಬರುತ್ತದೆ ಎಂಬುದಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿ ದಾಖಲಾಗಿದ್ದು ಇರುವುದಿಲ್ಲ. ನನ್ನ ಹೆಸರಿಗೆ ದಾವಾ ಆಸ್ತಿಗಳು ನೇರವಾಗಿ ಗ್ರಾಮ ದಾಖಲೆಗಳಲ್ಲಿ ದಾಖಲಾಗಿರುತ್ತದೆ. ಸದರಿ ದಾವಾ ಆಸ್ತಿಗಳಲ್ಲಿ ನನ್ನ ಅಜ್ಜಿಯ ಹೆಸರಿನಿಂದ ನೇರವಾಗಿ ನನ್ನ ಹೆಸರಿಗೆ ದಾಖಲಾಗಿವೆ.

ಸಾಕ್ಷಿಗೆ ನಿಪಿ.24 ನ್ನು ತೋರಿಸಿ ದಾವಾ ಸ್ಥಳಗಳು ನನ್ನ ತಾಯಿ ತೀರಿಕೊಂಡ ನಂತರ ಪೌತಿ ಖಾತೆಯ ಮೂಲಕ ನಮ್ಮ ಹೆಸರಿಗೆ ದಾಖಲಾಗಿದೆ ಎಂದು ಕೇಳಿದಾಗ , ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ.24 ರ ದಾಖಲೆಯು ನನ್ನ ತಾಯಿ ತೀರಿಕೊಂಡ ನಂತರ ವಾರಿಸಾ ಮೂಲಕ ಬದಲಾವಣೆ ಆಗಿದೆ ಎಂದರೆ ಸರಿ.

ಸದರಿ ನಿಪಿ. 24 ರ ಪ್ರಕಾರ ದಾವಾ ಸ್ಥಳಗಳು ವಾರಿಸಾ ನಾತೆಯಿಂದ ಬದಲಾದ ನಂತರ , ನಾವು ನಿಪಿ.25 ರ ಅನುಸಾರವಾಗಿ ತೊಂಡಿ ವಾಂಟಣಿಯನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಅಜ್ಜ ಹೇಳಿದಂತೆ ವಾಂಟಣಿಯನ್ನು ಮಾಡಿಕೊಂಡಿದ್ದೇವೆ ಎಂಬುದಾಗಿ ನುಡಿದಿದ್ದಾರೆ. ದಾವಾ ಸ್ಥಳಗಳು ನನ್ನ ಅಜ್ಜಿಯ ಹೆಸರಿನಲ್ಲಿದಂತಹ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ಥಳಗಳು ನನ್ನ ಅಜ್ಜಿಯ ಹೆಸರಿನಲ್ಲಿರುವಂತಹ ದಾಖಲೆಗಳ ಬಗ್ಗೆ ಈ ದಾವೆ ಹೂಡಿದ ನಂತರ ನಾನು ಚೌಕಾಶಿ ಮಾಡಿದ್ದು ಇರುವುದಿಲ್ಲ. ದಾವಾ ಆಸ್ತಿಗಳು ನನ್ನ ತಾಯಿಗೆ ಸಂಬಂಧಪಟ್ಟ ಆಸ್ತಿಗಳೆಂದರೆ ಸರಿಯಲ್ಲ, ಹಾಗೂ ದಾವಾ ಆಸ್ತಿಗಳು ನನ್ನ ಅಜ್ಜಿಯ ಆಸ್ತಿಗಳಾಗಿವೆ ಎಂಬುದಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಯು ತೀರಿಕೊಂಡ ನಂತರ ಸದರಿ ದಾವಾ ಸ್ಥಳಗಳ ವಾರಿಸಾ ನಾತೆಗಾಗಿ ನಾವೆಲ್ಲರೂ ಕೂಡಿಕೊಂಡು ತಹಶೀಲ್ದಾರ ಕಚೇರಿಗೆ ಅರ್ಜಿಯನ್ನು ನೀಡಿದ್ದೇವೆ. ವಾರಿಸಾ ಮೂಲಕ ಕಂದಾಯ ದಾಖಲೆಗಳು ಬದಲಾವಣೆ ಆಗಬೇಕಾದರೆ ವಂಶವೃಕ್ಷ, ಹಾಗೂ ಮೃತನ ವಾರಿಸುದಾರರ ಪ್ರಮಾಣ ಪತ್ರವನ್ನು ತಹಶೀಲ್ದಾರ ಕಚೇರಿಗೆ ನೀಡಬೇಕೆಂದಾಗ, ಸಾಕ್ಷಿಯು ನನ್ನ ಅಜ್ಜ , ನನ್ನ ಮಾವ ಕೊಟ್ಟಿರಬಹುದು ನನಗೆ ನಿಪಿ.24 ರ ಕುರಿತಾಗಿ ಮಾಹಿತಿ ಇಲ್ಲವೆಂಬುದಾಗಿ ನುಡಿದಿದ್ದಾರೆ. ನನ್ನ ತಾಯಿ ತೀರಿಕೊಂಡ ನಂತರ ವಂಶ ವೃಕ್ಷದ ಕುರಿತಾಗಿ ನಾನು ಚೌಕಾಶಿಯನ್ನು ಮಾಡಿದ್ದು ಇರುವುದಿಲ್ಲ, ಹಾಗೂ ಸದರಿ ದಾವಾ ಸ್ಥಳಗಳು ನನ್ನ ಹೆಸರಿಗೆ ಇರುವುದು ನನಗೆ ಗೊತ್ತಿತ್ತು ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

ನಿಪಿ.28 ರ ದಾಖಲೆಯು ನಮ್ಮ ಕುಟುಂಬದ ವಂಶವೃಕ್ಷವಾಗಿದೆ ಎಂದರೆ ಸರಿಯಲ್ಲ. ನಿಪಿ.28 ರ ವಂಶವೃಕ್ಷಕ್ಕೆ ತದ್ದವಿರುದ್ಧವಾಗಿ ಬೇರೆ ವಂಶವೃಕ್ಷ ನಮ್ಮ ಹತ್ತಿರವಿದ್ದು, ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸದರಿ ವಂಶವೃಕ್ಷದ ಪ್ರತಿಯು ನನ್ನ ಹತ್ತಿರ ಈಗ ಇರುವುದಿಲ್ಲ, ಅದನ್ನು ಇನ್ನುಮುಂದೆ ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇವೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಾನು ಉದ್ದೇಶಪೂರ್ವಕವಾಗಿ ವಾದಿಯರು ನನ್ನ ಸಹೋದರರೆಂದು ತಿಳಿದು , ತಿಳಿದು , ಅವರ ಬೆನ್ನ ಹಿಂದೆ ನಾನೊಬ್ಬಳೇ ನನ್ನ ತಾಯಿಯ ವಾರಿಸುದಾರಳೆಂಬುದಾಗಿ ವಾರಿಸಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಾದಿಯರು ಸೌದಿ ಹಾಗೂ ದುಬೈನಲ್ಲಿದ್ದರ ಗೈರು ಪಾಯದೆಯನ್ನು ಪಡೆದುಕೊಂಡು ನಾನು ವಾರಿಸಾ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಡೆ ಆ ಸುಳ್ಳು ವಂಶವೃಕ್ಷದ ಪ್ರಮಾಣ ಪತ್ರ ಈಗಲೂ ಇದ್ದು ಅದನ್ನು ಉದೇಶಪೂರ್ವಕವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ವಾದಿಯರು ರೆಹಮತುನ್ನಿಸ್ಸಾ ಹಸನ ಶಿರೂರ ಅವರ ಮಕ್ಕಳೆಂದು ರುಜುವಾತು ಆದರೆ ಅವರಿಗೆ ದಾವಾ ಸ್ಥಳಗಳಲ್ಲಿ ಹಕ್ಕು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ಥಳಗಳಲ್ಲಿ ವಾದಿಯರಿಗೆ ಹಕ್ಕಿದ್ದರೂ ಸಹ ಅವರಿಗೆ ಹಕ್ಕಿಲ್ಲವೆಂಬುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

C / c . ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.